ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1309

ಸದಸ್ಯರ ಹೆಸರು : ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 18-03-2020

ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಅಕ್ರಮ-ಸಕ್ರಮಕ್ಕಾಗಿ ಬಗರ್‌ಹುಕುಂ ಸಮಿತಿಗಳನ್ನು ರಚನೆ ಮಾಡಲಾಗಿದೆಯೇ; ಹಾಗಿದ್ದಲ್ಲಿ, ವಿವರ ನೀಡುವುದು;	ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ ರಡಿಯಲ್ಲಿ ವಿಧಾನಸಭಾ ಕ್ಷೇತ್ರವಾರು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ರಚಿಸಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯದಲ್ಲಿನ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಬೆಂಗಳೂರು ನಗರ ವ್ಯಾಪ್ತಿಯ 27 ವಿಧಾನಸಭಾ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದಂತೆ 55 ವಿಧಾನಸಭಾ ಕ್ಷೇತ್ರಗಳಲ್ಲಿ ಬಗರ್‌ಹುಕುಂ ಸಮಿತಿಗಳನ್ನು ರಚಿಸಲಾಗಿದೆ.
ಆ)	ಅಕ್ರಮ-ಸಕ್ರಮಕ್ಕಾಗಿ ಬಗರ್‌ಹುಕುಂ ಸಮಿತಿ ಅಸ್ತಿತ್ವಕ್ಕೆ ತರುವ ಯೋಜನೆ ಸರ್ಕಾರದ ಮುಂದಿದೆಯೇ; ಈ ಬಗ್ಗೆ ನ್ಯಾಯಾಲಯ ಸರ್ಕಾರಕ್ಕೆ ಪದೇ ಪದೇ ಎಚ್ಚರಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; (ವಿವರ ನೀಡುವುದು)	ಬಂದಿದೆ. ಈ ಬಗ್ಗೆ ದಿನಾಂಕ: 12/02/2020ರಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.
ಇ)	ಅಕ್ರಮ-ಸಕ್ರಮಕ್ಕಾಗಿ ಬಗರ್‌ಹುಕುಂ ಸಮಿತಿ ರಚನೆಯಾದರೆ ಎಷ್ಟು ರೈತರಿಗೆ ಅನುಕೂಲವಾಗುತ್ತದೆ ಹಾಗೂ ಫಾರಂ ನಂ.57ರ ಅಡಿ ಅರ್ಜಿ ಸಲ್ಲಿಸಲು ಇರುವ ಮಾನದಂಡವೇನು? (ವಿವರ ನೀಡುವುದು)	ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 108(ಎಫ್) ರಂತೆ ಮಂಜೂರಾತಿಯನ್ನು ಪಡೆಯಲು ಈ ಕೆಳಕಂಡ ಅರ್ಹತೆಯನ್ನು ಹೊಂದಿರಬೇಕು. • ಅವನು 18 ವರ್ಷ ವಯಸ್ಸು ದಾಟಿರಬೇಕು. • ಆ ಜಮೀನು ಸ್ಥಿತವಾಗಿರುವ ತಾಲ್ಲೂಕಿನ ಮಿತಿಗಳೊಳಗೆ ಅಥವಾ ಪಕ್ಕದ ತಾಲ್ಲೂಕಿನೊಳಗೆ ಅವನು ಖಾಯಂ ನಿವಾಸಿಯಾಗಿರಬೇಕು. • ಅವನು ವೈಯಕ್ತಿಕವಾಗಿ ಜಮೀನು ಬೇಸಾಯ ಮಾಡುತ್ತಿರುವ ಒಬ್ಬ ಸದ್ಭಾವಿಕ ಬೇಸಾಯಗಾರನಾಗಿರದ ಹೊರತು ಮತ್ತು ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ರ ಉಪಬಂಧಗಳ ಮೇರೆಗೆ ಜಮೀನನ್ನು ಹೊಂದುವುದರಿಂದ ಅಥವಾ ಪಡೆಯುವುದರಿಂದ ನಿಷೇಧಿಸಲ್ಪಟ್ಟಿರಬೇಕು.

		• ಅವನು 01/01/2005ಕ್ಕೆ ಪೂರ್ವದಲ್ಲಿ ಕನಿಷ್ಠ ಮೂರು ವರ್ಷಗಳಿಗೆ ಕಡಿಮೆಯಾಗಿರದ ಒಂದು ನಿರಂತವಾದ ಅವಧಿಗಾಗಿ ಆ ಜಮೀನಿನ ಅಧಿಕೃತ ಅಧಿಭೋಗದಾರನಾಗಿರದ ಹೊರತು ಸದರಿ ಅಧ್ಯಾಯದ ಮೇರೆಗೆ ಭೂ ಮಂಜೂರಾತಿ ಪಡೆಯಲು ಅರ್ಹನಾಗ ತಕ್ಕುದಲ್ಲ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಾಗಿರುವ ವ್ಯಕ್ತಿಗಳ ಪ್ರಕರಣದಲ್ಲಿ, ಅಂಥ ಅವಧಿಯು ಒಂದು ವರ್ಷಕ್ಕಿಂತ ಕಡಿಮೆಯಾಗಿರ ತಕ್ಕುದಲ್ಲ. • ಮಂಜೂರಿದಾರನು ತನ್ನ ಹಿಡುವಳಿ ಮತ್ತು ಮಂಜೂರಿ ಜಮೀನು ಸೇರಿ 4–38 ಎ/ಗುಂಟೆ ಒಳಗಡೆ ಇರತಕ್ಕದ್ದು. • ಬೆಂಗಳೂರು ಮಹಾನಗರ ಪಾಲಿಕೆಯಿಂದ 18 ಕಿ.ಮೀ., ನಗರಸಭೆ ಯಿಂದ 10 ಕಿ.ಮೀ., ಪುರಸಭೆಯಿಂದ 5 ಕಿ.ಮೀ., ವ್ಯಾಪ್ತಿಯಿಂದ ಮೀರಬೇಕು. • ಅವನು ವೈಯಕ್ತಿಕವಾಗಿ ಜಮೀನು ಬೇಸಾಯ ಮಾಡುತ್ತಿರುವ ಒಬ್ಬ ಸದ್ಭಾವಿಕ ಬೇಸಾಯಗಾರನಾಗಿರದ ಹೊರತು ಮತ್ತು ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ರ ಉಪಬಂಧಗಳ ಮೇರೆಗೆ ಜಮೀನನ್ನು ಹೊಂದುವುದರಿಂದ ಅಥವಾ ಪಡೆಯುವುದರಿಂದ ನಿಷೇಧಿಸಲ್ಪಟ್ಟಿರಬೇಕು. • ನಮೂನೆ–50 ಮತ್ತು ನಮೂನೆ–53ರಡಿ ಅರ್ಜಿ ಸಲ್ಲಿಸಿದವರು ನಮೂನೆ–57ರ ಅರ್ಜಿ ಸಲ್ಲಿಸಲು ಅರ್ಹರಾಗುವುದಿಲ್ಲ.

ಸಂಖ್ಯೆ: ಆರ್‌ಡಿ 58 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು